ಓ.ಎಸ್. ನಂ.*145/2018*

ಪಿ.ಡಬ್ಲು-*2.*

ಸಾಕ್ಷಿಯನ್ನು ಇಂದು ದಿನಾಂಕಃ *18.11.2022* ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಎ.ಡಬ್ಲು.ಎ. ವಕೀಲರಿಂದ**

ವಾದಿಗೆ ಅಣ್ಣ ತಮ್ಮಂದಿರು ಇರುವುದಿಲ್ಲ. ವಾದಿಯ ತಂದೆಗೆ ಒಬ್ಬರು ಸಹೋದರ ಇರುತ್ತಾರೆ. ವಾದಿಯ ತಂದೆ ದೊಡ್ಡವರೋ ಅಥವಾ ಅವರ ಸಹೋದರ ದೊಡ್ಡವರೋ ಎಂದು ನನಗೆ ಗೊತ್ತಿಲ್ಲ. ವಾದಿಯ ತಂದೆ ಮತ್ತು ಅವರ ಸಹೋದರನ ನಡುವೆ ಆಸ್ತಿ ವಿಭಜನೆ ಆಗಿರುತ್ತದೆ. ಯಾವ ಆಸ್ತಿಗಳು ಯಾರ ಯಾರ ಪಾಲಿಗೆ ಬಂದಿವೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿ ವಾದಿಯ ಸಹೋದರನಾದ ಯಶ್ವಂತರಾಯ ರವರ ಬಳಿಯಿಂದ ಖರೀದಿ ಮಾಡಿರುತ್ತಾನೆ. ಯಶ್ವಂತರಾಯ ಇತನು ತನ್ನ ಪಾಲಿಗೆ ಬಂದ ಜಾಗೆಯನ್ನು ಇಬ್ಬರಿಗೆ ಮಾರಿರುತ್ತಾರೆ, ೧) ಪ್ರತಿವಾದಿ, ೨) ಯಲಶೆಟ್ಟಿ ರವರಿಗೆ ಮಾರಾಟ ಮಾಡಿರುತ್ತಾನೆ. ಅವನ ಸಂಪೂರ್ಣ ಪಾಲು ಮಾರಾಟ ಮಾಡಿರುತ್ತಾನೆ. ಪ್ರತಿವಾದಿಗೆ ಎಷ್ಟು ಕ್ಷೇತ್ರ ಮಾರಾಟ ಮಾಡಿರುತ್ತಾನೆ, ಯಲಶೆಟ್ಟಿಗೆ ಎಷ್ಟು ಕ್ಷೇತ್ರ ಮಾರಾಟ ಮಾಡಿರುತ್ತಾನೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿ ತಾನು ಖರೀದಿಸಿದ ಜಾಗದಲ್ಲಿ ಕಟ್ಟಡ ಮಾಡಿರುತ್ತಾನೆ ಎಂದರೆ ಸರಿ. ಪ್ರತಿವಾದಿ ತಾನು ಖರೀದಿ ಹಿಡಿದ ಒಂದು ವರ್ಷದ ನಂತರ ಕಟ್ಟಡವನ್ನು ಮಾಡಿರುತ್ತಾನೆ. ಖರೀದಿ ತೆಗೆದುಕೊಂಡ ನಂಥರ ಎಷ್ಟು ದಿನಗಳ ಒಳಗಾಗಿ ಕಟ್ಟಿದ್ದಾನೆ ಎಂದು ಖಚಿತವಾಗಿ ಹೇಳಲು ಬರುತ್ತದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ ತಾನು ಖರೀದಿ ಹಿಡಿದ ಸಂಪೂರ್ಣ ಜಾಗದಲ್ಲಿ ಕಟ್ಟಡ ಕಟ್ಟಿಕೊಂಡಿರುತ್ತಾನೆ. ಪ್ರತಿವಾದಿ ತಾನು ಖರೀದಿ ಹಿಡಿದ ಜಾಗದಲ್ಲಿಯೇ ತನ್ನ ಕಟ್ಟಡ ಕಟ್ಟಿಕೊಂಡಿರುತ್ತಾನೆ ಎಂದರೆ ಸರಿ.

ದಾವಾ ಆಸ್ತಿ ಎಷ್ಟು ಉದ್ದಳತೆ ಗೊತ್ತಾ ಎಂಧರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಪೂರ್ವಕ್ಕೆ ನಡೆದಾಡಲು ಜಾಗ ಇದೆ, ಪಶ್ಚಿಮಕ್ಕೆ ಬಾಳಾಸಾಬ ದೇಶಮುಖ ರವರ ಮನೆ, ಉತ್ತರಕ್ಕೆ ಪೋಲಿಸ ಪಾಟೀಲರವರ ಮನೆ, ದಕ್ಷಿಣಕ್ಕೆ ವಾದಿಯ ಮನೆ ಇರುತ್ತದೆ. ಹೋಗಲು ಬರಲು ದಾರಿ ಪ್ರತಿವಾದಿಯ ಮನೆಯ ಪೂರ್ವ ದಿಕ್ಕಿಗೆ ಇರುತ್ತದೆ ಎಂದರೆ ಸರಿ. ಸದರಿ

ಹೋಗಲು ಬರಲು ಇರುವ ರಸ್ತೆ ದಕ್ಷಿಣೋತ್ತರವಾಗಿ ಇರುತ್ತದೆ ಎಂದರೆ ಸರಿ. ಸದರಿ ಓಡಾಡಲು ಇರುವ ರಸ್ತೆ ಸುಮಾರು ಅಗಲಕ್ಕೆ 25 ಫೂಟು ಇರಬಹುದು. ಉದ್ದಕ್ಕೆ ಸುಮಾರು 30-35 ಫೂಟು ಇರುತ್ತದೆ. ಸದರಿ ಓಡಾಡಲು ಇರುವ ರಸ್ತೆ ಸುಮಾರು 58-59 ವರ್ಷಗಳಿಂದ ಇದೆ, ಮುಂದುವರೆದು ನಾನು ಯಾವಾಗಲು ಅವರ ಮನೆಗೆ ಹೋಗಿ ಬರುವುದು ಮಾಡುತ್ತಿದ್ದೆನೋ ಅವಾಗಿನಿಂದ ಇದೆ ಎಂದು ನುಡಿಯುತ್ತಾರೆ. ಪ್ರತಿವಾದಿಯ ಮನೆಯ ತಲೆಬಾಗಿಲು ಪೂರ್ವ ದಿಕ್ಕಿಗೆ ಇರುತ್ತದೆ. ಸಾಕ್ಷಿ ಮುಂದುವರೆದು ಯಶ್ವಂತರಾವ ರವರ ಮನೆಯ ದಕ್ಷಿಣ ದಿಕ್ಕಿಗೆ ಇರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿಯ ತಲೆಬಾಗಿಲ ಪೂರ್ವ ದಿಕ್ಕಿಗೆ ಕಟ್ಟೆ ಮತ್ತು ಸ್ಟೇರಕೇಸ್ ಇರುತ್ತದೆ ಎಂದರೆ ಸರಿ. ಪ್ರತಿವಾದಿ ತನ್ನ ಮನೆಗೆ ಈಗ ಹೋಗಲು ಬರಲು ದಾರಿ ಇದೆ ಎಂದು ಹೇಳಿದರಲ್ಲಾ, ಅದೇ ದಾರಿಯಿಂದ ಹೋಗಲು ಬರುವುದು ಮಾಡುತ್ತಾನೆ ಎಂದರೆ ಸರಿ. ನಿಪಿ-26ನ್ನು ತೋರಿಸಿ ಇದರಲ್ಲಿ ನಿನ್ನದೇನಾದರೂ ಸಹಿ ಇದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಪಿ-೨೬ನ್ನು ಯಾರು ಬರೆದಿದ್ದಾರೆ ಮತ್ತು ಏನು ಬರೆದಿದ್ದಾರೆ ಯಾವಾಗ ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ವಾದಿ ನನ್ನ ಗೆಳೆಯನಿರುತ್ತಾನೆ ಎಂದರೆ ಸರಿ.

ವಾದಿ ಮತ್ತು ಪ್ರತಿವಾದಿಯ ನಡುವೆ ದಾರಿಯ ಸಲುವಾಗಿ ಜಗಳ ನಡೆದಿರುತ್ತದೆ. ಸದರಿ ದಾರಿಯ ಪೂರ್ವ ದಿಕ್ಕಿಗೆ ಗಟಾರ ಇದೆ ಎಂಧರೆ ಸರಿ ಅಲ್ಲ, ಸಾಕ್ಷಿ ಮುಂದುವರೆದು ಕಲ್ಲಿನಿಂದ ಕಟ್ಟಿದ ಮೋರಿ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಮೋರಿಯ ನೀರು ಉತ್ತರದಿಂದ ದಕ್ಷಿಣಕ್ಕೆ ಹರಿಯುತ್ತದೆ ಎಂದರೆ ಸರಿ. ಪ್ರತಿವಾದಿ ಮನೆಯನ್ನು ಕಟ್ಟಿ ಭೂಮಿಯಲ್ಲಿ ಪೈಪನ್ನು ಹಾಕಿ ಸದರಿ ಗಟಾರಕ್ಕೆ ತನ್ನ ಬಳಕೆಯ ನೀರು ಹೋಗಲಿಕ್ಕೆ ಕನೆಕ್ಷನ ಕೊಟ್ಟಿರುತ್ತಾನೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ವಾದ ಪತ್ರದ ಹಾತ ನಕಾಶೆಯನ್ನು ತೋರಿಸಿ ವಾದಿಯು ಪ್ರತಿವಾದಿ ತಾನು ಕಟ್ಟಿದ ಕಟ್ಟಡದಿಂದ ಮೋರಿಗೆ ಪೈಪಲೈನ್ ಮಾಡಿರುತ್ತಾನೆ ಎಂದು ಹಾತ ನಕಾಶೆಯಲ್ಲಿ ತೋರಿಸಿರುತ್ತಾರೆ ಎಂದರೆ ಸಾಕ್ಷಿಯು ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ವಾದಿ ನನ್ನ ಸ್ನೇಹಿತನಾದ ಕಾರಣ ಮತ್ತು ನಾವಿಬ್ಬರೂ ಒಂದೇ ತರಗತಿಯಲ್ಲಿ ಓದಿದ ಕಾರಣ ಅವನ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ, ಸಾಕ್ಷಿ ಮುಂದುವರೆದು ಇದ್ದ ಸಂಗತಿಯನ್ನೇ ಹೇಳುತ್ತಿದ್ದೇನೆ ಎಂದು ನುಡಿಯುತ್ತಾರೆ.

ಮರುವಿಚಾರಣೆ: ಇರುವುದಿಲ್ಲ.

ಓ.ಹೇ.ಕೆ.ಸರಿ.ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಆಳಂದ.